KP



ಧಾರವಾಡದ ಐಐಟಿ ಕ್ಯಾಂಪಸ್‌ನಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿಗೆ ಸನ್ಮಾನಿಸಲಾಯಿತು. ಈ ವೇಳೆ ಸಚಿವ ವಿ.ಸೋಮಣ್ಣ, ಸಚಿವ ಪ್ರಹ್ಲಾದ ಜೋಶಿ ಮತ್ತಿತರರು ಉಪಸ್ಥಿತರಿದ್ದರು.

ಕನ್ನಡಪ್ರಭ Mon, 13 March 2023
https://kpepaper.asianetnews.com/c



ಧಾರವಾಡದ ಐಐಟಿ ಕ್ಯಾಂಪಸ್‌ನಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ಐಐಟಿ ನೂತನ ಕ್ಯಾಂಪಸ್, ವಿಶ್ವದ ಅತಿ ದೊಡ್ಡ ಹುಬ್ಬಳ್ಳಿಯ ರೈಲ್ವೆ ಪ್ಲಾಟ್ ಫಾರ್ಮ್ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದರು.

ಕನ್ನಡಪ್ರಭ Mon, 13 March 2023
https://kpepaper.asianetnews.com/c/71904537



ಐಐಟಿ ನೂತನ ಕ್ಯಾಂಪಸ್ ಉದ್ಘಾಟನೆಗೆ ಆಗಮಿಸಿದ ಪ್ರಧಾನಿ ಅವರಿಗೆ ಜಿಲ್ಲಾಡಳಿತದ ವತಿಯಿಂದ ಕಲಘಟಗಿ ತೊಟ್ಟಿಲಿನ ಮಾದರಿಯನ್ನು ಕೊಡುಗೆಯಾಗಿ ನೀಡಲಾಯಿತು.

ಕನ್ನಡಪ್ರಭ Mon, 13 March 2023
https://kpepaper.asianetnews.c

## ಐಐಟಿ, ಐಐಐಟಿ ಸ್ಥಾಪನೆ

ವಿನಯ ಕುಲಕರ್ಣಿ ಅವರು ಸಚಿವರಿದ್ದಾಗಲೇ ಧಾರವಾಡಕ್ಕೆ ಭಾರತೀಯ ತಂತ್ರಜ್ಞಾನ ಸಂಸ್ಥೆ ಘೋಷಣೆಯಾಯಿತು. ಮೈಸೂರು, ರಾಯಚೂರು ಎನ್ನುತ್ತಿದ್ದ ಐಐಟಿಯನ್ನು ಧಾರವಾಡಕ್ಕೆ ತರಲು ವಿನಯ ಅವರ ಪ್ರಯತ್ನ ಅಷ್ಟಿಷ್ಟಲ್ಲ. ಕೆಲಗೇರಿ-ಚಿಕ್ಕಮಲ್ಲಿಗವಾಡ ಬಳಿ ಸಂಸ್ಥೆಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ 470 ಎಕರೆ ಭೂಮಿಯನ್ನು ಉಚಿತವಾಗಿ 2016ರಲ್ಲಿ ಹಸ್ತಾಂತರಿಸಿತು. ತಾತ್ಕಾಲಿಕವಾಗಿ ಐಐಟಿ ತರಗತಿಗಳು ನಡೆಯುವಂತೆ ವಾಲ್ಮಿಯಲ್ಲಿ ಅನುಕೂಲ ಮಾಡಿಕೊಡಲಾಯಿತು. ಆಗ ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವರಾಗಿದ್ದ ಜಾವಡೇಕರ, ಸಿದ್ದರಾಮಯ್ಯ ಸಾಕ್ಷಿಯಾಗಿದ್ದನ್ನು ಮರೆಯುವಂತಿಲ್ಲ. ಇದಲ್ಲದೇ ಐಐಐಟಿ (ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಇನಫಾರಮೇಶನ್ ಟೆಕ್ನಾಲಜಿ) ಸಹ ಕಾಂಗ್ರೆಸ್ ಸರ್ಕಾರದಲ್ಲಿಯೇ ಸ್ಥಾಪನೆಯಾಗಿದ್ದು ತಡಸಿನಕೊಪ್ಪದಲ್ಲಿ 61 ಎಕರೆ ಜಾಗ ಸಹ ಉಚಿತವಾಗಿ ರಾಜ್ಯ ಸರ್ಕಾರದಿಂದ ಒದಗಿಸಿದ್ದು ಸ್ಮರಣೀಯ.




ವಿವಿಧ ವಿಭಾಗಗಳನ್ನು ನಿರ್ಮಿಸಲಾಯಿತು. ತಾಲೂಕಿನ ಹೆಬ್ಬಳ್ಳಿ, ಗರಗ, ಉಪ್ಪಿನ ಬೆಟಗೇರಿಯಲ್ಲಿ ತಲಾ ₹2.5 ಕೋಟಿಯಂತೆ ₹6.17 ಕೋಟಿ ವೆಚ್ಚದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ನೂತನ ಕಟ್ಟಡಗಳನ್ನು ವಿನಯ ಕುಲಕರ್ಣಿ ಅವಧಿಯಲ್ಲಿ ನಿರ್ಮಾಣ ಮಾಡಲಾಯಿತು.

ಧಾರವಾಡ ಗ್ರಾಮೀಣ ಜನತೆ ಜಿಲ್ಲಾಸ್ಪತ್ರೆಯನ್ನೇ ನೆಚ್ಚಿಕೊಂಡಿದ್ದಾರೆ. ಹಿರಿಯ ನಾಗರಿಕರಿಗೆ ಪ್ರತ್ಯೇಕ ವಾರ್ಡ್ ನಿರ್ಮಾಣದ ಕೀರ್ತಿ ವಿನಯ ಅವರಿಗೆ ಸಲ್ಲುತ್ತದೆ. ₹26.15 ಕೋಟಿಯಲ್ಲಿ 100 ಹಾಸಿಗೆಗಳ ಮಹಿಳಾ ಮತ್ತು ಮಕ್ಕಳ ಆರೈಕೆ ಕೇಂದ್ರ ನಿರ್ಮಿಸಲು ವಿನಯ ಅವರ ಪ್ರಯತ್ನವಿದೆ.